


ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದ ಸೇತುವೆಯೊಂದರ ಗೋಡೆಯ ಮೇಲೆ ರಾಮಾಯಣದ ಭಿತ್ತಿಚಿತ್ರಗಳು



ಪಂಜರದ ಈ ಗಿಣಿಗಳೂ ರಾಮನಾಮ ಉಲಿಯುತ್ತಿರಬಹುದೆ?



ಅಯೋಧ್ಯೆಯ ಲತಾ ಮಂಗೇಶ್ಕರ್ ಚೌಕದಲ್ಲಿ ನಿರ್ಮಿಸಲಾಗಿರುವ ವೀಣೆಯ ಕಲಾಕೃತಿ ಪ್ರವಾಸಿಗರ ಪಾಲಿಗೆ ಸೆಲ್ಫಿ ಪಾಯಿಂಟ್




ಗುಲಾಬಿಗಳ ಮೇಲೆ ಅರಳಿರುವ ಭಕ್ತಿ–ಪ್ರೀತಿ



ಪ್ರವಾಸಿಗರ ಪಾಲಿಗೆ ಅಯೋಧ್ಯೆ ಪ್ರವಾಸದ ನೆನಪುಗಳಾಗಿ ಉಳಿಯುವ ರಾಮ ಮಂದಿರದ ಪ್ರತಿಕೃತಿಗಳು

ಬೇಡಿಕೆಯ ಪ್ರವಾಸಿ ಕೇಂದ್ರಗಳಲ್ಲೊಂದಾಗಿ ರೂಪುಗೊಂಡಿದೆ. ರಾಮನ ಹೆಸರಿನಲ್ಲಿ ಸಾಂಸ್ಕೃತಿಕ ಹಾಗೂ ವಾಣಿಜ್ಯಿಕವಾಗಿ ನಗರ ಹೊಸ ರೂಪ ಪಡೆದುಕೊಂಡಿದೆ. ಭಕ್ತಿಯ ಕಾರಣದಿಂದಾಗಿ ದೇಶದ ಗಮನಸೆಳೆದಿರುವ ಅಯೋಧ್ಯೆ ವಾಣಿಜ್ಯಿಕ ಶಕ್ತಿಯಾಗಿಯೂ ಮಹತ್ವ ಪಡೆದುಕೊಳ್ಳುತ್ತಿದೆ.

ಮಂದಿರ ಪೂರ್ಣಗೊಂಡ ನಂತರ ಅಯೋಧ್ಯೆಗೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವ ನಿರೀಕ್ಷೆಯಿದೆ. ಆ ನಿರೀಕ್ಷೆಯಲ್ಲಿಯೇ ನಗರದಲ್ಲಿ ಹೊಸ ವಸತಿ ಗೃಹಗಳು, ಭೋಜನಾಲಯಗಳು ಸೇರಿದಂತೆ ಹಲವು ಉದ್ದಿಮೆಗಳು ಆರಂಭಗೊಂಡಿವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ಇರುವುದರಿಂದ, ಪ್ರವಾಸಿ ಕೇಂದ್ರ ವಾಣಿಜ್ಯ ನಗರಿಯಾಗಿಯೂ ರೂಪುಗೊಳ್ಳುವ ಸಾಧ್ಯತೆಯಿದೆ.